Reg. No. | | | | | | | | | |

**BASKAL 104/BSWKAL 104**

**ಗುಣಾಂಕ ಆಧಾರಿತ ಮೊದಲನೆಯ ಚತುರ್ಮಾಸ ಬಿ.ಎ./ಬಿ.ಎಸ್.ಡಬ್ಲ್ಯೂ. ಪದವಿ ಪರೀಕ್ಷೆ,**
**ಅಕ್ಟೋಬರ್/ನವೆಂಬರ್ 2017**
**(2017 – 18 Batch Onwards Scheme)**

**ಕನ್ನಡ**

**ಕನ್ನಡ ಭಾಷಾ ಪತ್ರಿಕೆ – I**

Time : 3 Hours Max. Marks : 80

I. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. **(8×3=24)**

1) ದಮಯಂತಿಯ ದುಃಖವನ್ನು 'ಲೋಕದ ಮಾನಿನಿಯೊಳಾರುಂಟು ಎನ್ನವೊಲ್' ಕಾವ್ಯಭಾಗದ ಹಿನ್ನೆಲೆಯಲ್ಲಿ ವಿವರಿಸಿ.

**ಅಥವಾ**

ಶಿವನ ಮಹಿಮೆ ಹಾಗೂ ಶಿವಭಕ್ತರ ಹಿರಿಮೆಯನ್ನು ಮಸಣಯ್ಯ ಹೇಗೆ ವಿವರಿಸಿದ್ದಾನೆ ?

2) ಮೇರಿ ಕ್ಯೂರಿ ಅವರು ಅಸದೃಶ ಪ್ರತಿಭೆಯನ್ನು ಹೊಂದಿದ್ದರೆಂಬುದನ್ನು ಲೇಖನದ ಹಿನ್ನೆಲೆಯಲ್ಲಿ ಸಮರ್ಥಿಸಿ.

**ಅಥವಾ**

ಜೀವನದಲ್ಲಿ ಒಳಿತನ್ನು ಮಾಡಿದರೆ ಅಭ್ಯುದಯವಾಗುತ್ತದೆಂಬ ವಿಚಾರವನ್ನು 'ನಾಯಿಯಾದರೂ ತಾಯಿ' ಕಥೆ ಹೇಗೆ ಪ್ರತಿಪಾದಿಸಿದೆ ? ವಿವರಿಸಿ.

3) ವಿಕಿಪೀಡಿಯದ ವೈಶಿಷ್ಟ್ಯವನ್ನು ವಿವರಿಸಿ.

**ಅಥವಾ**

ಕನ್ನಡ ವಿಕಿಪೀಡಿಯ ಎಂದರೇನು ? ಕನ್ನಡ ವಿಕಿಪೀಡಿಯದ ಹುಟ್ಟು ಮತ್ತು ಬೆಳವಣಿಗೆಯನ್ನು ವಿವರಿಸಿ.

II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. **(5×3=15)**

1) ಆಧುನಿಕ ಸ್ತ್ರೀ ಸಂವೇದನೆಯ ನಿಲುವುಗಳು 'ಕನಸುಗಳು' ಕವನದಲ್ಲಿ ಚಿತ್ರಣಗೊಂಡಿರುವ ಬಗೆಯನ್ನು ತಿಳಿಸಿ.

**ಅಥವಾ**

ತುಳುನಾಡು 'ಬಂಗಾರದ ಬಟ್ಟಲು' ಹೇಗೆ ? ಕವನದ ಹಿನ್ನೆಲೆಯಲ್ಲಿ ನಿರೂಪಿಸಿ.

2) ಧನದ ಮೋಹಕ್ಕೆ ಒಳಗಾದ ದುಷ್ಟಬುದ್ಧಿಯು ಕೊನೆಗೆ ತೊಂದರೆಗೆ ಒಳಗಾದ ಬಗೆಯನ್ನು ವಿವರಿಸಿ.

ಅಥವಾ

'ಸಮಾನತೆಯ ಸುಳಿಯಲ್ಲಿ' ಕಥೆಯ ಆಶಯವನ್ನು ತಿಳಿಸಿ.

3) ವಿಕಿಪೀಡಿಯದ ಖಾತೆ ತೆರೆದು ಲೇಖನ ಬರೆಯುವುದು ಹೇಗೆ ?

ಅಥವಾ

ಕೊಟ್ಟಿರುವ ಗದ್ಯಭಾಗವನ್ನು ಓದಿ ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ.

ಸ್ವಾಮಿ ಜಗದಾತ್ಮನಂದರು ಹೇಳುತ್ತಾರೆ. ಜಗತ್ತು ಪೂಜಿಸುವುದು ದುರ್ಬಲತೆಯನ್ನಲ್ಲ ಶಕ್ತಿಯನ್ನು. ನಾವು ಶಕ್ತರಾಗಿದ್ದರೆ ಜಗತ್ತೇ ನಮ್ಮನ್ನು ಪೂಜಿಸುತ್ತದೆ, ಹೊಗಳುತ್ತದೆ. ನೆಂಟರೆಲ್ಲ ಹಿತರು. ಅಶಕ್ತನಾದರೆ ಆಪ್ತ ಜನರೇ ವೈರಿಗಳು. ಪುರಂದರದಾಸರು ಹೇಳಿದ್ದು ಇದನ್ನೇ. ತಂದೆ ತಾಯಿಂದಿರು ದಡ್ಡರೂ, ಮೂರ್ಖರೂ ಆದರೆ ಏನೆನ್ನುತ್ತಾರೆಂದು ಬಲ್ಲಿರಾ? ಯಾಕಾಗಿ ಹುಟ್ಟಿದನಿವನು ಕುಲಕ್ಕೆ ಕಳಂಕ ಎನ್ನುವರಲ್ಲವೆ? ಹೌದು. ಶಕ್ತಿ ಚಿರಜೀವನದ ಒಳಗುಟ್ಟು, ದುರ್ಬಲತೆ – ಚಿಂತೆ ದು:ಖಗಳಿಗೆ ಮೂಲ ದುರ್ಬಲ. ತಾನು ನಾಶವಾಗುವುದಲ್ಲದೆ ಇತರರಲ್ಲಿ ಶೋಷಣೆ ಮತ್ತು ಹಿಂಸೆಯ ಪ್ರವೃತ್ತಿಯನ್ನು ಹುಟ್ಟಿಸುತ್ತಾನೆ. ನಮ್ಮ ಪರಂಪರೆ ನೀಡುವ ಮುಖ್ಯ ಬೋಧನೆಯೇ ಶಕ್ತಿಯನ್ನು ಬೆಳೆಸಿಕೊಳ್ಳಿ ಎಂಬುದು . ನಿರ್ವೀರ್ಯನಾಗಬೇಡ, ದುರ್ಬಲನಾಗಬೇಡ ಎಂದು ಶ್ರೀಕೃಷ್ಣ ಅರ್ಜುನನಿಗೆ ಬೋಧಿಸಿದ ನಮ್ಮ ಬಾಳನ್ನು ಬೆಳಗಿಸಲು ನಮಗೆ ಬೇಕಾಗಿರುವುದು ಮಾರ್ಗದರ್ಶನ ಶಕ್ತಿ, ಸಮಯ ಸ್ಫೂರ್ತಿ ಮತ್ತು ಶಾಂತಿ.

ನಮ್ಮ ಭವಿಷ್ಯವನ್ನು ನಿರ್ಮಿಸಿಕೊಳ್ಳುವವರು ನಾವೇ ಎಂಬುದನ್ನು ಮರೆಯಬಾರದು. ಮಿಂಚಿ ಹೋದ ಕಾರ್ಯವನ್ನು ಕುರಿತು ಚಿಂತಿಸುವ ವ್ಯರ್ಥ ಕಾಲಹರಣ ಬೇಡ. ಅನಂತ ಭವಿಷ್ಯ ನಮ್ಮ ಮುಂದೆ ಇದೆ ಎಂಬುದನ್ನು ನಾವು ಸದಾ ನೆನಪಿನಲ್ಲಿಡಬೇಕು. ನಮ್ಮ ಪ್ರತಿಯೊಂದು ಯೋಚನೆ ಮಾತು ಮತ್ತು ಕೆಲಸ – ಇವೇ ನಮ್ಮ ಭವಿಷ್ಯತ್ತಿನ ಬುತ್ತಿಯಾಗಿ ಪರಿಣಮಿಸುವವು. ಕೆಟ್ಟ ಯೋಜನೆ ಕೆಟ್ಟ ಕೆಲಸಗಳು ಕ್ರೂರ ಹುಲಿಯಂತೆ ನಮ್ಮ ಮೇಲೆ ನೆಗೆಯಲು ಸಿದ್ಧವಾಗಿದ್ದಾಗಲೇ ಒಳ್ಳೆಯ ಯೋಚನೆ ಮತ್ತು ಕಾರ್ಯಗಳು ಸಾತ್ವಿಕ ಶಕ್ತಿಯಿಂದ ಸದಾ ನಮ್ಮನ್ನು ರಕ್ಷಿಸಲು ಸಿದ್ಧವಾಗಿರುತ್ತದೆ ಎಂಬ ದೃಢವಿಶ್ವಾಸ ನಮ್ಮ ಪಾಲಿಗೆ ಸತ್ಕಾರ್ಯದ ಮಹಾಪ್ರೇರಕ ಶಕ್ತಿ ಎಂದಿದ್ದಾರೆ.

1) ಸ್ವಾಮಿ ಜಗದಾತ್ಮನಂದರು ಜಗತ್ತು ಯಾವುದನ್ನು ಪೂಜಿಸುತ್ತದೆ ಎನ್ನುತ್ತಾರೆ ?

2) ಆಪ್ತ ಜನರು ಯಾವಾಗ ವೈರಿಗಳಾಗುತ್ತಾರೆ ?

3) ನಮ್ಮ ಪರಂಪರೆ ನೀಡುವ ಮುಖ್ಯ ಬೋಧನೆ ಯಾವುದು ?

4) ಶ್ರೀಕೃಷ್ಣ ಅರ್ಜುನನಿಗೆ ನೀಡುವ ಸಂದೇಶವೇನು ?

5) ಯಾವುದನ್ನು ನಾವು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು ?

III. ಒಂದು ಪದ್ಯಭಾಗದ ಸಂದರ್ಭ ಸೂಚಿಸಿ ಮಹತ್ವವನ್ನು ವಿವೇಚಿಸಿ. (5x1=5)

1) ನೀನೊಲಿದು ಕೊರ್ತವರು ನಿಮಗೊಲಿದು ಕೊರ್ತವರು
ನಿಮ್ಮ ಪರಿಯೇ ಅವರು, ನಿಮ್ಮ ರೂಹೇ ಅವರು
ಅವರನೇನ ಹೇಳುವೆ
ಆಳಾರು ಅರಸಾರು ಎಂದರಿಯಬಾರದು
ನಿಮ್ಮ ರೂಹೆ ಅವರು
ಮಹಾಲಿಂಗ ಗಜೇಶ್ವರನೊಲಿದು ಪೂಜಿಸಿದವರು
ಸಾಲೋಕ್ಯ ಸಾಮೀಪ್ಯ ಸಾರೂಪ್ಯ
ಸಾಯುಜ್ಯ ಪದವಿಗಳ ಪಡೆವರು
ಎನಗೆ ನಿಮ್ಮ ಶರಣರೇ ನೀವೆಂದು
ಅರಿದಿರ್ಪುದೇ ಸಾಕು.

2) ಏನನೆಂಬೆನು ತನ್ನ ಪುಣ್ಯದ
ಹಾನಿಯನು ಎಲೆ ತಾಯಿ ಲೋಕದ
ಮಾನಿನಿಯೊಳಾರುಂಟು ಎನ್ನವೊಲ್
ತೊಳಲಿ ಬಳಲಿದರು
ದಾನವಾಮರರೊಳಗೆ ಕಾಣೆ ಸ
ಮಾನರನು ನಳನೃಪಗೆ ಯೆನ್ನಿದ
ಕೇನ ಮಾಡುವೆನೆನುತ ಕಂಬನಿ
ದುಂಬಿದಳು ತರುಣಿ

IV. ಕೆಳಗಿನ ಎರಡು ಪ್ರಶ್ನೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿವರಿಸಿ. (4x2=8)

1) ಹಳುವದಲಿ ಸತಿಯ ಕಳೆದು ಹೋದವರುಂಟೇ ?
2) ಜ್ಞಾನಿಯಾಗಿಲ್ಲ. ಬರಿ ತೀಕ್ಷ್ಣಮತಿಯಾದ
3) ಮನೆ ಮೋಹ ಹತ್ತಿರ ಹತ್ತಿರ ಸೆಳೆಯುತಿದೆ
4) ಬಗೆ ಬಗೆ ಕುಣಿತ ಕಂಬಳ ಕೋಲ.

V. ಅ) ಕೆಳಗಿನ ಎರಡರ ಕುರಿತು ಟಿಪ್ಪಣಿ ಬರೆಯಿರಿ. (4x2=8)

1) ಕನಕದಾಸ
2) ಸುಕನ್ಯಾ ಮಾರುತಿ
3) ಯರ್ಮುಂಜ ರಾಮಚಂದ್ರ
4) ಪ್ರೊ. ಅಮೃತ ಸೋಮೇಶ್ವರ

ಆ) ಕೆಳಗಿನ ಎರಡರ ಕುರಿತು ಟಿಪ್ಪಣಿ ಬರೆಯಿರಿ. (4×2=8)

1) ದುರ್ಗಸಿಂಹ
2) ಮೇರಿಕ್ಯೂರಿ
3) ಎಲ್.ಸಿ. ಸುಮಿತ್ರ
4) ವೆಂಕಟರಾಜ ಪಾನಸೆ.

VI. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. (12×1=12)

1) ಗಜೇಶ ಮಸಣಯ್ಯನ ಅಂಕಿತ ಯಾವುದು ?
2) 'ಹಕ್ಕಿ–ಪಲ್ಟಿ' ಕವನವನ್ನು ಬರೆದವರು ಯಾರು ?
3) ಅಮೃತ ಸೋಮೇಶ್ವರ ಅವರ ಮೊದಲ ಕಥಾಸಂಕಲನದ ಹೆಸರೇನು ?
4) 'ಕನಸುಗಳು' ಕವನವನ್ನು ಯಾವ ಸಂಕಲನದಿಂದ ಆರಿಸಲಾಗಿದೆ ?
5) ಜಿ.ಶಂ.ಪರಮಶಿವಯ್ಯ ಅವರ ಪಿ. ಎಚ್. ಡಿ. ಮಹಾಪ್ರಬಂಧದ ಹೆಸರೇನು ?
6) ದುರ್ಗಸಿಂಹನ ಜನ್ಮಸ್ಥಳ ಯಾವುದು ?
7) ಲಾಲ್ ಬಹದ್ದೂರ್ ಶಾಸ್ತ್ರೀಯವರು ರೈತನನ್ನು ಕುರಿತು ಏನೆಂದು ಘೋಷಿಸಿದರು ?
8) ಮೇರಿಕ್ಯೂರಿಯವರ ಹಿರಿಯ ಮಗಳ ಹೆಸರೇನು ?
9) ವಿಕಿಪೀಡಿಯ ಪದದ ನಿಷ್ಪತ್ತಿಯನ್ನು ಬರೆಯಿರಿ.
10) ತ್ವರಿತ ವಿಶ್ವಕೋಶ ಎಂದರೇನು ?
11) 'ಹವಾಯಿ' ಎಂದರೇನು ?
12) ಪ್ರಪಂಚದಲ್ಲಿ ಎಷ್ಟು ಭಾಷೆಗಳಲ್ಲಿ ವಿಕಿಪೀಡಿಯ ಇದೆ ?